(11)

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ- KPRC/ADM20RBL/8/2020/ DD2

ಪಂಚಾಯತ್ ರಾಜ್ ಆಯುಕ್ತಾಲಯ,
ಕಲ್ಲು ಕಟ್ಟಡ, ಕಾಳಿದಾಸ ರಸ್ತೆ, ಕೆ.ಜಿ. ರೋಡ್ ಜಂಕ್ಷನ್,
ಗಾಂಧಿನಗರ, ಬೆಂಗಳೂರು-560009
ದಿನಾಂಕ-23.11.2020

ಸುತ್ತೋಲೆ

ವಿಷಯ : ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976ರಡಿ ಬಿಡುಗಡೆಗೊಳಿಸಲಾದ ಜೀತದಾಳುಗಳಿಗೆ ಸಮಗ್ರ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸುವ ಕುರಿತು.

ಉಲ್ಲೇಖ 1. ದಿನಾಂಕ- 27.10.2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ. ರಾಜ್) ಇವರ ಅಧ್ಯಕ್ಷತೆಯಲ್ಲಿ ನಡೆದ ಜೀತದಾಳುಗಳ ಪುನರ್ವಸತಿ ಯೋಜನೆಯ ನಡವಳಿಯ ನಿರ್ಣಯಗಳು.

2. ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದವರ ಕಛೇರಿ ಆದೇಶ ಸಂಖ್ಯೆ- F.No.S- 11012/01/2015-BL

ಜೀತದಾಳುಗಳ ಪುನರ್ವಸತಿ ಯೋಜನೆಯು ಕೇಂದ್ರ ವಲಯ ಯೋಜನೆಯಾಗಿದೆ. ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976ರಡಿಯಲ್ಲಿ ಗುರುತಿಸಲಾದ ಜೀತದಾಳುಗಳನ್ನು ಬಿಡುಗಡೆಗೊಳಿಸಿ ಅವರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುವ ಜವಾಬ್ದಾರಿ ಸರ್ಕಾರ ಹಾಗೂ ಅನುಷ್ಠಾನಾಧಿಕಾರಿಗಳ ಕರ್ತವ್ಯವಾಗಿದೆ.

ಕನಿಷ್ಠ ವೇತನ , ಮೂಲ ಭೂತ ಸೌಲಭ್ಯ ನೀಡದೇ, ಪುರುಷರು- ಮಹಿಳೆಯರಿಗೆ ಸಮಾನವಾದ ವೇತನ ನೀಡದೇ , ಅವರ ಮಕ್ಕಳನ್ನು ಶಿಕ್ಷಣದಿಂದ ವಂಚಿಸಿ ದುಡಿಸಿಕೊಳ್ಳುವ ಉದ್ಯಮಿಗಳು/ಖಾಸಗಿ ವ್ಯಕ್ತಿಗಳಿಗೆ ಜೀತ ಪದ್ಧತಿ(ರ) ಕಾಯ್ದೆ , 1976 ರಡಿ ಕ್ರಿಮಿನಲ್ ಮೊಕದ್ದಮ್ಮೆ ದಾಖಲಿಸಿ ಶಿಕ್ಷೆ ನೀಡುವುದು ಒಂದು ಜವಾಬ್ದಾರಿಯಾದರೆ, ಜೀತದಿಂದ ಮುಕ್ತಿಹೊಂದಿದವರಿಗೆ ಸಾಮಾಜಿಕ ಮತ್ತು ಆರ್ಥಿಕ ಪುನಶ್ಚೇತನ ಒದಗಿಸುವುದು ಬಹು ಮುಖ್ಯವಾದ ಕರ್ತವ್ಯವಾಗಿದೆ.

ಜೀತದಾಳುಗಳ ಪುರ್ನವಸತಿ ಯನ್ನು ಸಮರೋಪಾದಿಯಲ್ಲಿ ಸಮಗ್ರವಾಗಿ ಕೈಗೊಳ್ಳಬೇಕಾಗಿದೆ. ಇದನ್ನು ಉಲ್ಲೇಖ-2 ಕೇಂದ್ರ ಸರ್ಕಾರದ ಮಾರ್ಗಸೂಚಿಯ ಅಂಶ- 5ರಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ. ಈ ಮಾರ್ಗಸೂಚಿಯನ್ನು ಪಾಲಿಸುವಂತೆ ತಿಳಿಸಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ ಸೂಚಿಸಲಾಗಿದೆ. ಮತ್ತೊಮ್ಮೆ ಈ ಕೆಳಕಂಡಂತೆ ಜೀತದಾಳುಗಳ ಪುರ್ನವಸತಿಯನ್ನು ಕೈಗೊಳ್ಳಬೇಕಾಗಿ ಸೂಚಿಸಿದೆ:

1. ಬಿಡುಗಡೆಹೊಂದಿದ ಜೀತದಾಳುಗಳಿಗೆ ಬಿಡುಗಡೆ ಪ್ರಮಾಣ ಪತ್ರದೊಂದಿಗೆ ರೂ.20,000/- ಗಳ ತುರ್ತು ಪರಿಹಾರ ಅನುದಾನವನ್ನು ಜಿಲ್ಲಾಧಿಕಾರಿಗಳು ವಿತರಿಸಲು ಕ್ರಮ ವಹಿಸಬೇಕು (Cheque/RTGS/E-Transfer ಮುಖೇನ ಮಾತ್ರ ಅನುದಾನ ವಿತರಣೆಯಾಗಬೇಕು).

2. ಸ್ವಂತ ರಾಜ್ಯಕ್ಕೆ ಸೇರಿದಂತಹ ಜೀತವಿಮುಕ್ತರಿಗೆ ತಿಂಗಳಿಗೆ ರೂ.1000/- ದಂತೆ 24 ತಿಂಗಳಿಗೆ ತಲಾ ರೂ.24,000/- ಗಳನ್ನು ಆಯಾಯ ಜಿಲ್ಲಾ ಪಂಚಾಯಿತಿ ಬಿಡುಗಡೆ ಮಾಡಲು ಕ್ರಮವಹಿಸಬೇಕು. ಈ ಮೇಲೆ ತಿಳಿಸಿದಂತೆ ಈ ಅನುದಾನ ವಿತರಣೆ Cheque/RTGS/E-

Scanned by CamScanner

Transfer ಮುಖೇನ ಮಾತ್ರ ಮಾಡಬೇಕು.

3. ಜೀತವಿಮುಕ್ತರಿಗೆ ಕಾಲಮಿತಿಯೊಳಗೆ- ಆಧಾರ್ ಕಾರ್ಡ್, ಚುನಾವಣಾ ಚೀಟಿ, ಪಡಿತರ ಚೀಟಿ ಗಳನ್ನು ಜಿಲ್ಲಾಡಳಿತ ಒದಗಿಸಬೇಕು. ಜೀತವಿಮುಕ್ತರ ಬಿಡುಗಡೆ ಪತ್ರವನ್ನು ಗುರುತಿನ ಚೀಟಿ ಎಂದು ಪರಿಗಣಿಸಿ ಅವರಿಗೆ ಅದರ ಮೂಲಕವೇ ಆಧಾರ್ ಕಾರ್ಡ್, ಬ್ಯಾಂಕ್ ಖಾತೆಗಳನ್ನು ತೆರೆಯಲು ಸಹಕರಿಸಬೇಕು.

3. ಅನುದಾನೇತರ ಪುನರ್ವಸತಿಯಾದ- ನಿವೇಶನ ಹಂಚಿಕೆ, ವಸತಿ ನಿರ್ಮಾಣ , ಶೌಚಾಲಯ ನಿರ್ಮಾಣ, ಕುಡಿಯುವ ನೀರು, ವಿದ್ಯುತ್ ಸೌಲಭ್ಯಗಳನ್ನು ಜೀತವಿಮುಕ್ತರಿಗೆ ಆದ್ಯತೆ ಮೇರೆಗೆ ನೀಡಬೇಕು.

ಕಡ್ಡಾಯವಾಗಿ ಜೀತದಾಳುಗಳ ಕುಟುಂಬಕ್ಕೆ ಮನರೇಗಾ ಯೋಜನೆಯಡಿ ಉದ್ಯೋಗ ಚೀಟಿಯನ್ನು ವಿತರಿಸಬೇಕು. ಶಿಕ್ಷಣ ಪಡೆದುಕೊಳ್ಳುವ ವಯಸ್ಸಿನ ಮಕ್ಕಳಿದ್ದಲ್ಲಿ ಕಡ್ಡಾಯವಾಗಿ ಶಾಲಾ ದಾಖಲಾತಿಯನ್ನು ಮಾಡಿಸಬೇಕು. ಈ ಜವಾಬ್ದಾರಿಯನ್ನು ಆಯಾಯ ಪಂಚಾಯಿತಿ ವ್ಯಾಪ್ತಿಯ PDO/ಕಾರ್ಯದರ್ಶಿಗಳು ಮಾಡಬೇಕಾಗಿರುತ್ತದೆ.

ಇದರ ಜೊತೆಗೆ ಮತ್ತಾವುದಾದರೂ ಸಾಮಾಜಿಕ ಭದ್ರತೆ ಯೋಜನೆಯಡಿ ಪಿಂಚಣಿಗೆ ಅರ್ಹರಿರುವ ಜೀತವಿಮುಕ್ತರನ್ನು ಗುರುತಿಸಿ ಅವರಿಗೆ ಆ ಯೋಜನೆಯಡಿ ಪಿಂಚಣಿ ಸೌಲಭ್ಯವನ್ನು ಒದಗಿಸಲು ಸಂಬಂಧಿಸಿದ ಅಧಿಕಾರಿಗಳು ಕ್ರಮವಹಿಸಬೇಕು.

4. ಸ್ವಂತ ಉದ್ಯೋಗ ಪ್ರಾರಂಭಿಸಲು ಅವಶ್ಯವಿರುವ ಮಾರ್ಗದರ್ಶನವನ್ನು(Counselling) ಪ್ರತ್ಯೇಕವಾಗಿ ಜೀತವಿಮುಕ್ತರ ಕುಟುಂಬಕ್ಕೆ ಜಿಲ್ಲಾ ಪಂಚಾಯಿತಿಯವರು ಮಾಡಿಸಬೇಕು. ಜೀತವಿಮುಕ್ತರ ಪುನರ್ವಸತಿ ಕುರಿತ ಪ್ರಗತಿಯನ್ನು ಆಯಾಯ ಜಿಲ್ಲಾ ಹಾಗೂ ಉಪ-ವಿಭಾಗ ಮಟ್ಟದ ಜಾಗೃತಿ ಸಮಿತಿಗಳು ತ್ರೈಮಾಸಿಕ ಸಭೆಗಳಲ್ಲಿ ಅವಲೋಕಿಸಬೇಕು.

5. ಜೀತ ವಿಮುಕ್ತರು ಪುನಃ ಜೀತಕ್ಕೆ ಸಿಲುಕದಂತೆ ಅವರ ಕುಟುಂಬಕ್ಕೆ ಕನಿಷ್ಠ ವೇತನ ಇತರ ಮೂಲ ಭೂತ ಸೌಲಭ್ಯ ಸಿಗುತ್ತಿರುವ ಬಗ್ಗೆ ಜೀತದಿಂದ ಬಿಡುಗಡೆಯಾದ ನಂತರ ವರ್ಷಗಳಲ್ಲಿ ನಿಗಾ ವಹಿಸಬೇಕು. ಕನಿಷ್ಠ 3 ವರ್ಷಗಳಾದರೂ ಈ ಕೆಲಸವನ್ನು ಆಯಾಯ ಪಂಚಾಯಿತಿ PDO ರವರು ಹಾಗೂ ಜಾಗೃತಿ ಸಮಿತಿಗಳು ಮಾಡಬೇಕು. ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸಹಾ ಇದಕ್ಕೆ ಸಹಕಾರ ನೀಡಬೇಕು.

6. ಸ್ವಂತ ರಾಜ್ಯಕ್ಕೆ ಸೇರಿದಂತಹ ಜೀತ ವಿಮುಕ್ತರು ಬಿಡುಗಡೆಯಾದ 3 ತಿಂಗಳೊಳಗಾಗಿ ಜೀತ ವಿಮುಕ್ತರ ಹಾಗೂ ಅವರ ಕುಟುಂಬದವರಿಗೆ ಕೌಶಲ್ಯ ತರಬೇತಿ , ಸ್ವಯಂ ಉದ್ಯೋಗ ನೀಡುವ ಕುರಿತು ಆಯಾಯ ಜಿಲ್ಲಾ ಪಂಚಾಯಿತಿಗಳು ಒಂದು ಶಿಭಿರವನ್ನು ನಡೆಸಬೇಕು. ಈ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯಿತಿಯಲ್ಲಿರುವ NRLM Coordinator/DPMU ಗಳು ನೆರವೇರಿಸುವಂತೆ CEO ರವರು ನಿರ್ದೇಶನ ನೀಡಬೇಕು. ಈ ಶಿಭಿರವನ್ನು ನಡೆಸಿರುವ ದಾಖಲೆಯನ್ನು ಜಿಲ್ಲಾ ಪಂಚಾಯಿತಿಯು ನಿರ್ವಹಿಸಬೇಕು.

7. ಗ್ರಾಮ ಪಂಚಾಯಿತಿಯಲ್ಲಿ PDO ಗಳು ಜೀತವಿಮುಕ್ತರ ಮಾಹಿತಿಯನ್ನು ಕಡ್ಡಾಯವಾಗಿ ವಹಿಯಲ್ಲಿ ನಿರ್ವಹಿಸಿ ಅವರ ವಿಳಾಸ, ಸಂಪರ್ಕ ಸಂಖ್ಯೆಗಳು, ಅವರುಗಳಿಗೆ ನೀಡಿರುವ ಸೌಲಭ್ಯಗಳ ವಿವಿರಗಳನ್ನು ದಾಖಲಿಸಬೇಕು.

8. NRLM ಮತ್ತು ಇತರೆ ನಿಯಮಾನುಸಾರ ಸ್ವಯಂ ಉದ್ಯೋಗ ಮಾಡುವ ಯೋಜನೆಗಳಡಿ ಸೌಲಭ್ಯವನ್ನು ಪಡೆದುಕೊಳ್ಳುವಂತೆ ಆಯಾಯ ಪಂಚಾಯಿತಿ PDO ಗಳು / ಕಾರ್ಯದರ್ಶಿಗಳು ಕಡ್ಡಾಯವಾಗಿ ಜೀತ ಕುಟುಂಬಗಳಿಗೆ ಮಾರ್ಗದರ್ಶನ ನೀಡಬೇಕು.

9. ಜಿಲ್ಲಾ ಪಂಚಾಯಿತಿಯು ತ್ರಿಸದಸ್ಯ ಸಮಿತಿ ಸಭೆಗಳಲ್ಲಿ, ಮಾಸಿಕ ಪ್ರಗತಿ

Scanned by CamScanner

ಅವಲೋಕಿಸುವಾಗ, ಜಾಗೃತಿ ಸಮಿತಿಗಳ ಸಭೆಯಲ್ಲಿ ಸರ್ಕಾರದ ವಿವಿಧ ಯೋಜನೆಗಳಡಿ ಲಭ್ಯವಾಗುವ ಸೌಲಭ್ಯವನ್ನು ಜೀತವಿಮುಕ್ತರಿಗೆ ನೀಡುವ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. (ಉದಾ: ಅಂಬೇಡ್ಕರ್ ನಿಗಮದಿಂದ- ಭೂಮಿ, ವಸತಿ, ಕೌಶಲ್ಯ ತರಬೇತಿ ಸಾಲ, ಗಂಗಾ ಕಲ್ಯಾಣ ಯೋಜನೆಯಡಿ ಬೋರ್ ವೆಲ್) .

ವಾರ್ಷಿಕವಾಗಿ ಜೀತವಿಮುಕ್ತರಿಗೆ ನೀಡಿರುವ ಅನುದಾನ ಹಾಗೂ ಅನುದಾನೇತರ ಸೌಲಭ್ಯಗಳ ವಿವರವನ್ನು ಫಲಾನುಭವಿವಾರು ಸರ್ಕಾರಕ್ಕೆ ಖಡ್ಡಾಯವಾಗಿ ಜಿಲ್ಲಾ ಪಂಚಾಯಿತಿಗಳು ನೀಡಬೇಕು. ಜಿಲ್ಲಾಡಳಿತವು ನೀಡಿರುವ ಪುನರ್ವಸತಿ ವಿವರವನ್ನು ಸಹಾ ಅದರಲ್ಲಿ ದಾಖಲಿಸಬೇಕು. ಜೀತದಾಳುಗಳ ಪುನರ್ವಸತಿಯನ್ನು ಸಮಗ್ರವಾಗಿ ಕೈಗೊಳ್ಳಬೇಕು, ಯಾವುದೇ ಲೋಪವದಲ್ಲಿ ಸಂಬಂಧಿಸಿದ ಅಧಿಕಾರಿಗಳು ಜವಾಬ್ದಾರರಾಗುತ್ತಾರೆ. ಈ ಸುತ್ತೋಲೆಯು ಸಂಬಂಧಿಸಿದ ಎಲ್ಲಾ ಇಲಾಖೆಗಳ ಅನುಷ್ಠಾನ ಅಧಿಕಾರಿಗಳಿಗೆ ಅನ್ವಯಿಸುತ್ತದೆ.

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Phone- 080-22010418, karsgsy@gmail.com

ಸುತ್ತೋಲೆಯನ್ನು ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಕ್ಕಾಗಿ ಕಳುಹಿಸಿದೆ:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ

   ಜಿಲ್ಲಾ ಹಾಗೂ ಉಪವಿಭಾಗ ಮಟ್ಟದ ಜಾಗೃತಿ ಸಮಿತಿಯ ಸದಸ್ಯರುಗಳಿಗೆ
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ CEO ಗಳಿಗೆ
3. ರಾಜ್ಯದ ಎಲ್ಲಾ ಉಪವಿಭಾಗಾಧಿಕಾರಿಗಳಿಗೆ
4. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿಗಳಿಗೆ.
5. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ PDO ಮತ್ತು ಪಂಚಾಯಿತಿ ಕಾರ್ಯದರ್ಶಿಗಳಿಗೆ.
6. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕಾರ್ಮಿಕಾಧಿಕಾರಿಗಳಿಗೆ

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂಚಾಯ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪಂ. ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ. ರಾಜ್), ಗ್ರಾಅಪಂ. ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳಿಗೆ

Scanned by CamScanner